# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.

ಸಂಖ್ಯೆ: ವೈ1(ಇ.ಪ)ಸಂ.ಬೈಂ/08/2018-19 ದಿನಾಂಕ: 01.12.2018

---------------
---------------
---------------
---------------

ಮಾನ್ಯರೆ,

ವಿಷಯ: ಫಲಿತಾಂಶ ಸಂಪುಟಗಳ ಬೈಂಡಿಂಗ್ ಕಾರ್ಯಕ್ಕೆ ದರಪಟ್ಟಿ ಕರೆಯುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಇತರೆ ಪರೀಕ್ಷೆಗಳ ವ್ಯಾಪ್ತಿಯಲ್ಲಿ ಬರುವ ಫಲಿತಾಂಶ ಪಟ್ಟಿಗಳನ್ನು ಬೈಂಡಿಂಗ್ ಮಾಡಲು ಒಂದು ಸಂಪುಟಕ್ಕೆ ಎಲ್ಲಾ ತೆರಿಗೆ, ಸಾಗಾಣಿಕೆ ವೆಚ್ಚ ಸೇರಿಸಿ ದಿನಾಂಕ: 10.12.2018ರ ಸಾಯಂಕಾಲ 5.00 ಗಂಟೆಯೊಳಗೆ ದರಪಟ್ಟಿ ಸಲ್ಲಿಸಲು ತಿಳಿಸಿದೆ.

ಷರತ್ತು ಮತ್ತು ನಿಬಂಧನೆಗಳು:-

1. ಸಂಪುಟಗಳನ್ನು ಅರ್ಧ ಲೆದರ್ ಬೈಂಡಿಂಗ್ ಮತ್ತು ಮುಂಭಾಗದ ಮೂಲೆಗಳಿಗೆ ಲೆದರ್ ಬೈಂಡಿಂಗ್ 40 ಔನ್ಸ್ ಸ್ಟ್ರಾ ಬೋರ್ಡ್ ಬಳಸಿ ಬೈಂಡಿಂಗ್ ಮಾಡಬೇಕು.
2. ಫಲಿತಾಂಶ ಪಟ್ಟಿಯ ಎಲ್ಲಾ ಪುಟಗಳು ಕ್ರಮಬದ್ಧವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಯಾವುದಾದರು ಪುಟಗಳು ಮುದ್ರಿತವಾಗಿಲ್ಲದೆ ಇದ್ದಲ್ಲಿ ಅದನ್ನು ಸಂಬಂಧಿಸಿದ ಪರೀಕ್ಷಾ ಶಾಖಾಧಿಕಾರಿಗಳ ಗಮನಕ್ಕೆ ತಂದು ಸದರಿ ಸಂಪುಟಗಳನ್ನು ಮುದ್ರಿಸಿಕೊಂಡು ಸದರಿ ಸಂಪುಟಕ್ಕೆ ಸೇರ್ಪಡೆ ಮಾಡುವುದು.
3. ನಿಗದಿತ ಅವಧಿಯಲ್ಲಿ ಬೈಂಡಿಂಗ್ ಮಾಡಿ ಸರಬರಾಜು ಮಾಡಬೇಕು. ವಿಳಂಬವಾದಲ್ಲಿ ಪ್ರತಿ ದಿನಕ್ಕೆ ರೂ.100-00ರಂತೆ ದಂಡ ವಿಧಿಸಲಾಗುವುದು.
4. ಬೈಂಡಿಂಗ್ ಕಾರ್ಯಕ್ಕೆ ನೀಡುವ ದಾಖಲೆಗಳು ಪ್ರಮುಖ ಹಾಗೂ ಗೌಪ್ಯವಾಗಿರುವುದರಿಂದ ಈ ದಾಖಲೆಗಳ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಾಪಾಡಬೇಕು.
5. ಬೈಂಡಿಂಗ್ ಕಾರ್ಯಕ್ಕೆ ನೀಡುವ ದಾಖಲೆಗಳನ್ನು ಮುಚ್ಚುವುದು, ಬದಲಿಸುವುದು, ತಿದ್ದುಪಡಿ ಮಾಡುವುದು ಕಂಡುಬಂದಲ್ಲಿ ಕ್ರಿಮಿನಲ್ ಮೊಕದ್ದಮೆ ಮತ್ತು ವಿಧಿಸುವ ದಂಡಕ್ಕೆ ಒಳಪಡಬೇಕಾಗಿರುತ್ತದೆ.
6. ಫಲಿತಾಂಶ ಪಟ್ಟಿಯ ಎಲ್ಲಾ ಪುಟಗಳನ್ನು ಶಾಖಾಧಿಕಾರಿಗಳು ನೀಡುವ ಸೂಚನೆಯಂತೆ ಬೈಂಡಿಂಗ್ ಮಾಡಬೇಕಾಗುತ್ತದೆ.
7. ಮುಂಗಡ ಪಾವತಿಸುವುದಿಲ್ಲ. ಆದಾಯ ತೆರಿಗೆ ಕಟಾಯಿಸಿ ಫಾರಂ-16ಎ ನೀಡಲಾಗುವುದು.
8. ತಯಾರಿಸುವ ಸಂಪುಟದ ಮಾದರಿಯನ್ನು ಕಛೇರಿ ವೇಳೆಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.
9. ದರಪಟ್ಟಿಯಲ್ಲಿ ಒಮ್ಮೆ ಒಪ್ಪಿದ ದರವು ಮುಂದಿನ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ಇದೇ ದರದಲ್ಲಿ ಸಂಪುಟಗಳನ್ನು ಬೈಂಡಿಂಗ್ ಮಾಡಿ ನೀಡಬೇಕು.
10. ಮೇಲಿನ ನಿಬಂಧನೆಗಳನ್ವಯ ಕಾರ್ಯ ನಿರ್ವಹಿಸದಿದ್ದಲ್ಲಿ ಬಿಲ್ಲಿನ ಮೊತ್ತ ಪಾವತಿಸಲಾಗುವುದಿಲ್ಲ.

ತಮ್ಮ ನಂಬುಗೆಯ,

ನಿರ್ದೇಶಕರ ಪರವಾಗಿ 1/12/18
(ಇತರೆ ಪರೀಕ್ಷೆಗಳು)

ಕರಡು ನಿರ್ದೇಶಕರು(ಇ.ಪ)ರವರಿಂದ ಅನುಮೋದಿಸಲ್ಪಟ್ಟಿದೆ.

D:\Valume Binding.docx

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ನಿರ್ದೇಶಕರು(ಇತರೆ ಪರೀಕ್ಷೆಗಳು)ರವರ ಕಛೇರಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**

ಸಂಖ್ಯೆ: ವೈ1(ಇ.ಪ)ಗೌ.ಲ.ಸ/08/2018-19 ದಿನಾಂಕ: 03.12.2018.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗದಲ್ಲಿನ ಸಂಪುಟಗಳ ಬೈಂಡಿಂಗ್ ಕಾರ್ಯಕ್ಕಾಗಿ ದರಪಟ್ಟಿ ಸಲ್ಲಿಸುವ ನಮೂನೆ

| ಕ್ರ ಸಂ | ಹೆಸರು | ಬಳಸಬೇಕಾದ ಸಾಮಗ್ರಿಯ ಹೆಸರು | ಅಂದಾಜು ಪ್ರಮಾಣ | ಎಲ್ಲಾ ತೆರಿಗೆ ಸೇರಿದಂತೆ ಒಂದು ಸಂಪುಟ ಬೈಂಡಿಂಗ್‌ಗೆ ನಮೂದಿಸಿದ ದರ |
|---|---|---|---|---|
| 1 | ಸಂಪುಟಗಳ ಬೈಂಡಿಂಗ್ ಕಾರ್ಯ | ಕಾರ್ಯಾದೇಶದಲ್ಲಿ ನೀಡಿರುವ ಷರತ್ತುಗಳಂತೆ | 120 | |

## ದೃಢೀಕರಣ

ದರಪಟ್ಟಿ ಆಹ್ವಾನದ ಎಲ್ಲಾ ಷರತ್ತುಗಳಿಗೂ ಬದ್ಧರಾಗಿರುತ್ತೇವೆ. ಎಂದು ಈ ಮೂಲಕ ದೃಢೀಕರಿಸಿದೆ.

ಸಂಸ್ಥೆ ಮಾಲೀಕರ ಸಹಿ ಮತ್ತು
ವಿಳಾಸದ ಮೊಹರು

ಸ್ಥಳ:

ದಿನಾಂಕ: